

# ನಾಯಕಿ ಅಳುಮುಂಜಿ ಆಗಬೇಕಿಲ್ಲ

## ಇಂಚರ ಜೋಷಿ

**ಸ್ಟಾರ್‌ಸುವರ್ಣದ 'ಮರಳಿ ಬಂದಳು ಸೀತೆ'ಯ ಭೂಮಿ**

◆ **ನಿಮ್ಮ ಪರಿಚಯ ಮಾಡಿಕೊಡಿ?**

ಅಪ್ಪ ಸುಹಾಸ್ ಜೋಷಿ ಧಾರವಾಡದ ಬಯಲುಸೀಮೆಯವರು, ಅಮ್ಮ ಜ್ಯೋತಿ ಜೋಷಿ ಕುಡ್ಲಕಡೆಯ ಕುಂದಾಪುರದವರು. ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಅಕ್ಕ ಮಾನಸಿ ಆಕೆನೂ ನಟಿ. ಈ ಕ್ಷೇತ್ರಕ್ಕೆ ಬರುತ್ತೇನೆ ಎಂದು ಗೊತ್ತಿರಲಿಲ್ಲ. ಎಂಟನೇ ತರಗತಿ ಓದುವಾಗ 'ಪ್ರತಿಭಾ ಕಾರಂಜಿ' ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಕ್ಕೆ ಒಂದು ನಾಟಕವನ್ನು ನೀಡಿದೆವು. ವರದಕ್ಷಿಣೆಗೆ ಸಂಬಂಧಿಸಿದ ನಾಟಕವನ್ನು ಬರೆದು, ನಿರ್ದೇಶಿಸಿ– ನಟನೆಯನ್ನೂ ಮಾಡಿದ್ದೆ. ಜಿಲ್ಲಾ ಮಟ್ಟದಲ್ಲಿ ಮೂರನೇ ಸ್ಥಾನ ಅದಕ್ಕೆ ಬಂದಿತ್ತು. ಒಂಬತ್ತನೇ ತರಗತಿಯಲ್ಲಿದ್ದಾಗ ವೃದ್ಧಾಶ್ರಮದ ವಿಷಯ ವಸ್ತುವನ್ನು ಇಟ್ಟುಕೊಂಡು ನಾಟಕ ಮಾಡಿಸಿದ್ದೆ. ಎಸ್ಸೆಸ್ಸೆಲ್ಸಿ ಸಂದರ್ಭದಲ್ಲಿ ಓದಿಗೆ ತೊಂದರೆಯಾಗುತ್ತದೆ ಎಂದು ಮಾಡಲಿಲ್ಲ. ಮೊದಲ ಪಿಯು ಓದುವಾಗ ಒಂದು ನೃತ್ಯ ರೂಪಕವನ್ನು ಮಾಡಿದ್ದೆ. ಪಿಯು ಮುಗಿದ ನಂತರ ನಮ್ಮ ಅಪ್ಪ ನಟನೇ ಇಷ್ಟನಾ? ಅಲ್ಲೇ ತೊಡಗುತ್ತೀಯಾ? ಎಂದು ಕೇಳಿದರು. ಮೂರು ತಿಂಗಳು ತರಬೇತಿ ಕೊಡಿಸಿದರು. ಕ್ಯಾಮೆರಾ ಎದುರಿಸುವುದರಿಂದ ಹಿಡಿದು ಅಭಿನಯದ ಮೂಲ ಪಾಠವನ್ನು ಅಲ್ಲಿ ಕಲಿತೆ. ಮೂರೇ ತಿಂಗಳಲ್ಲಿ ನನಗೆ ಅವಕಾಶ ಸಿಕ್ಕವು. ಒಂದು ದುರಂತ ಏನೆಂದರೆ ನವೆಂಬರ್‌ಗೆ ತರಬೇತಿ ಸೇರಿ ಜನವರಿಗೆ ಅಭಿನಯ ಆರಂಭಿಸಿದೆ. ನನ್ನ ತಂದೆ ಜನವರಿ 13ರಂದು ತೀರಿಕೊಂಡರು. ಅವರು ಪರದೆಯ ಮೇಲೆ ನನ್ನನ್ನು ನೋಡಲೇ ಇಲ್ಲ ಎನ್ನುವ ಕೊರಗು ಇದ್ದೇ ಇದೆ. ನಮ್ಮ ತಾಯಿ ಅಭಿನಯಕ್ಕೆ ವಿರೋಧಿಸಿದ್ದರು ಆಗ ಅವರನ್ನು ನಮ್ಮ ತಂದೆಯೇ ಒಪ್ಪಿಸಿದ್ದರು.

◆ **ನಿಮಗೆ ನಟನೆಯಲ್ಲಿ ಯಾರು ಇಷ್ಟ ಆಗ್ತಾರೆ?**

ಬಾಲಿವುಡ್‌ನಲ್ಲಿ ವಿಕ್ಕಿ ಕೌಶಲ್, ಕನ್ನಡದಲ್ಲಿ ಸುದೀಪ್ ಹಾಗೂ ಯಶ್ ಇಷ್ಟ ಆಗ್ತಾರೆ. ಏಕೆಂದರೆ ಅವರ ವೃತ್ತಿನಿಷ್ಠೆ ಅನುಕರಣೀಯ. ಸುದೀಪ್ ಹೊಸ ಸಿನಿಮಾ ಒಂದಕ್ಕೆ ಅವರ ದೇಹವನ್ನು ಹುರಿಗೊಳಿಸಲು ಸಿಕ್ಕಾಪಟ್ಟೆ ಶ್ರಮ ವಹಿಸಿದ್ದಾರೆ. 'ವಿಲನ್' ಸಿನಿಮಾ ಸಂಪೂರ್ಣ ಅವರ ಮೇಲೆ ನಿಂತಿದೆ ಅನ್ನಿಸಿತು. ಹಾಗೆಯೇ ದೀಪಿಕಾ ಪಡುಕೋಣೆ, ರಣವೀರ್ ಸಿಂಗ್ ಕನ್ನಡದ ರಮ್ಯಾ ಮತ್ತು ರಾಧಿಕಾ ಪಂಡಿತ್ ಇಷ್ಟ ಆಗ್ತಾರೆ.

◆ **ಶಿಕ್ಷಣವನ್ನು ಅಂದುಕೊಂಡತೆ ಮಾಡಲು ಆಗಿಲ್ಲ ಎನ್ನುವ ಬೇಸರ ಇದೆಯೇ?**

ಕಾಲೇಜಿಗೆ ಸೇರುವಾಗಲೇ ಸಿಎ ಮಾಡುವ ಎಂದುಕೊಂಡಿದ್ದೆ. ಬಿಕಾಂ ಓದುತ್ತಿದ್ದೇನೆ ಸಿಎ ಆಗಿಲ್ಲ ಎಂದು ಬೇಜಾರಾಗಿಲ್ಲ. ಏಕೆಂದರೆ ಇಷ್ಟಪಟ್ಟು ಬಂದಿದ್ದರಿಂದ ಇಲ್ಲೇ ಖುಷಿಯಾಗಿದ್ದೇನೆ. ಇಷ್ಟ ಇಲ್ಲದ ಜಾಗಕ್ಕೆ ಬಂದಿಲ್ಲ. ನಮ್ಮ ಪೋಷಕರ ಬೆಂಬಲವಿದೆ. ಒಂದು ಕಾಲದಲ್ಲಿ ನಮ್ಮ ಬಗ್ಗೆ ಕೀಳಾಗಿ ಮಾತನಾಡುತ್ತಿದ್ದವರೆಲ್ಲ ಈಗ ಗೌರವದಿಂದ ಗುರುತಿಸುತ್ತಿದ್ದಾರೆ. ಮೊದಲೆಲ್ಲ ನಮ್ಮ ತಾಯಿ ದುಃಖದಿಂದ ಕಣ್ಣೀರು ಸುರಿಸುವುದನ್ನು ನೋಡಿದ್ದೆವು. ಈಗ ಆನಂದಕ್ಕೆ ಕಣ್ಣೀರು ಸುರಿಸುತ್ತಿದ್ದಾರೆ. ಅಷ್ಟೇ ಸಾರ್ಥಕತೆ ಸಾಕು.

◆ **ನಿರ್ದೇಶನ ಮಾಡುವ ಯೋಚನೆ ಇದೆಯೇ?**

ಚಿಕ್ಕ ಚಿಕ್ಕ ಸಂಗತಿಯನ್ನು ಶೂಟಿಂಗ್ ಮನೆಯಲ್ಲಿ ಗಮನಿಸುತ್ತೇನೆ. ಮೊದಲಿನಿಂದಲೂ ಕಥೆಗಳನ್ನು ಬರೆಯುತ್ತಿದ್ದೆ. ಅದನ್ನು ಬಳಸಿಯೇ ನಾನು ನಾಟಕ ಬರೆದಿದ್ದೆ. ನಟನೆ ನನಗೆ ಹೆಚ್ಚು ಇಷ್ಟ ಈಗ ಅದನ್ನು ಮಾಡುತ್ತಿದ್ದೇನೆ. ಚಿಕ್ಕವಳಿದ್ದಾಗಿನಿಂದಲೂ ಸಿನಿಮಾ ನೋಡುವಾಗ ಕೆಲ ಡೈಲಾಗ್, ಮುಖ್ಯಸಂಗತಿಗಳನ್ನು ಬರೆದಿಟ್ಟುಕೊಳ್ಳುತ್ತಿದ್ದೆ. ನಿರ್ದೇಶನ ಮಾಡುವ ಆಶೆಯಿದೆ. ಅನುಭವ ಪಕ್ವವಾದ ಮೇಲೆ ಅದನ್ನೂ ಮಾಡುತ್ತೇನೆ. ಅದರ ಜೊತೆ ನಿರ್ಮಾಣವನ್ನೂ ಮಾಡಬಹುದು. ನನ್ನ ಅಕ್ಕನ ಜೊತೆ ಸೇರಿಯೂ ಮಾಡಬಹುದು. ಮುಂದೆ ಏನೋ ಆಗಬಹುದು. ಆದರೆ ಎಲ್ಲವನ್ನೂ ಮಾಡಿಯೇ ಮಾಡುತ್ತೇನೆ. ಹಂತ ಹಂತವಾಗಿ ನೋಡಬೇಕು. ಡಾನ್ಸ್ ಮಾಡುತ್ತೇನೆ. ಹಾಡು ಹೇಳುತ್ತೇನೆ. ಅಡುಗೆ ಮಾಡುತ್ತೇನೆ. ಎಲ್ಲವನ್ನೂ ತುಂಬ ಪ್ರೀತಿಯಿಂದಲೇ ಮಾಡುತ್ತೇನೆ. ಇನ್ನೂ ಬೇಜಾನ್ ಕಲಿಯಬೇಕು.

◆ **ಯಾವ ರೀತಿಯ ಪಾತ್ರ ಇಷ್ಟ ಆಗುತ್ತೆ?**

ಎಲ್ಲ ರೀತಿಯ ಪಾತ್ರ ಇಷ್ಟ. ನಾಯಕಿಯೇ ಆಗಬೇಕು ಎನ್ನುವುದಿಲ್ಲ. ಪಾತ್ರ ನಾಯಕಿ ಆಗಲಿ ಖಳನಾಯಕಿಯಾಗಲಿ ಅದನ್ನು ನಿಭಾಯಿಸುತ್ತೇನೆ. ನಾಯಕಿ ಪಾತ್ರ ಮಾಡುವಾಗ ತುಂಬ ಅಳುಮುಂಜಿ ಪಾತ್ರ ಇಷ್ಟ ಆಗಲ್ಲ. ಖಳನಾಯಕಿಗೆ ಬುದ್ಧಿ ಕಲಿಸುವಂತಿರಬೇಕು. ಖಳನಾಯಕಿ ಹೇಗಿರಬೇಕು ಅಂದರೆ ಖಳನಾಯಕಿಗೆ ಸಖತ್ತಾಗಿ ಟಕ್ಕರ್ ಕೊಡುವಂತಿರಬೇಕು. ಆಗ ಧಾರಾವಾಹಿ ಮಜಾ ಕೊಡುತ್ತದೆ. ಇಬ್ಬರೂ ಬುದ್ಧಿವಂತರಿರಬೇಕು. ಗೆಲ್ಲಬೇಕಾಗಿರುವುದು ಸತ್ಯ. ಯಾವುದೇ ಪಾತ್ರ ಇದ್ದರೂ ನಿಭಾಯಿಸಿಕೊಂಡು ಹೋಗುತ್ತೇನೆ.

◆ **ಭೂಮಿಪಾತ್ರ ಹೇಗಿದೆ?**

ತುಂಬ ಬೋಲ್ಡ್ ಹುಡುಗಿ. ಬಾಯಿ ಮುಚ್ಚಿಕೊಂಡು ಇರಲ್ಲ. ಇಬ್ಬರು ಅಣ್ಣಂದಿರ ಮುದ್ದಿನ ತಂಗಿ. ನಕಲಿ ಸೀತೆಯನ್ನು ಎದುರಿಸುತ್ತಾಳೆ. ವೈಯಕ್ತಿಕವಾಗಿ ಸೌಮ್ಯ ಸ್ವಭಾವದ ನಾನು ತಕ್ಷಣ ಪ್ರತಿಭಟಿಸಲ್ಲ. ಆ ಕೊರತೆಯನ್ನು ಪಾತ್ರದ ಮೂಲಕ ಈಡೇರಿಸಿಕೊಳ್ಳುತ್ತೇನೆ. ಇಲ್ಲಿ ಏನು ಬೇಕಾದರೂ ಹೇಳಬಹುದು. ನಿಜ ಜೀವನದಲ್ಲಿ ಮನಸಿಗೆ ಬಂದಿದ್ದೆಲ್ಲ ಹೇಳಲ್ಲ. ಅಣ್ಣ ತಂಗಿ ಸೂಪರ್ ಆಗಿ ಬರ್ತಾ ಇದೆ. ನಮ್ಮ ಜೋಡಿಗಾಗಿ ವಿಶೇಷ ಸೀನ್ ಒಂದನ್ನು ಚಿತ್ರಿಸಲಾಯಿತು. ಅದಕ್ಕೆ ವೀಕ್ಷಕರ ಮೆಚ್ಚುಗೆಯೇ ಕಾರಣ.

■ **ರಾಘವೇಂದ್ರ ಕೆ.**